**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 15-09-2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**1)** ಈ ದಾವೆಯನ್ನು ಸುಮಾರು 12 ಐಟಂ ಸ್ವತ್ತುಗಳ ಬಗ್ಗೆ ದಾಖಲಿಸಿರುತ್ತೇನೆ. ಯಾವ ಯಾವ ಆಸ್ತಿಗಳು ಎಂದು ಕೆಲವು ಆಸ್ತಿಗಳ ಸರ್ವೆ ಸಂಖ್ಯೆಗಳು ಗೊತ್ತು, ಕೆಲವು ಗೊತ್ತಿಲ್ಲ. ದಾವಾ ಅಸ್ತಿಗಳಲ್ಲಿ ಎರಡು ಐಟಂ ಸ್ವತ್ತುಗಳು ಕೆಐಎಡಿಬಿ ಯಿಂದ ಭೂ ಸ್ವಾಧೀನ ಆಗಿರುತ್ತವೆ. ಯಾವ ಸರ್ವೆ ಸಂಖ್ಯೆಗಳು ಎಂದು ನನಗೆ ಹೇಳಲು ಬರುವುದಿಲ್ಲ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ದಾವಾ ಐಟಂ ಸಂಖ್ಯೆ 1 ಮತ್ತು 2 ಭೂ ಸ್ವಾಧೀನ ಆಗಿರುತ್ತದೆ. ದಾವಾ ಐಟಂ ಸಂಖ್ಯೆ 3 ನಿ.ಪಿ.28 ರಂತೆ ಭೂ ಸ್ವಾಧೀನ ಆಗಿರುತ್ತದೆ. ನಿ.ಪಿ.30 ರಂತೆ ದಾವಾ ಐಟಂ ಸಂಖ್ಯೆ 4 ಸಹ ಭೂ ಸ್ವಾಧೀನ ಆಗಿರುತ್ತದೆ. ದಾವಾ ಐಟಂ ಸಂಖ್ಯೆ 1 ರಿಂದ 3 ಮಂಜೂರು ಆಗಿರುವ ಆಸ್ತಿಗಳು ಎಂದರೆ ನಮ್ಮ ತಾತ ಖರೀದಿಸಿದ ಸ್ವತ್ತುಗಳು ಎಂದು ನುಡಿಯುತ್ತೇನೆ. ಹಾಗೆ ನಮ್ಮ ತಾತ ಖರೀದಿಸಿರುತ್ತಾರೆ ಎನ್ನುವ ಬಗ್ಗೆ ಖರೀದಿ ಪತ್ರಗಳನ್ನು ಹಾಜರುಪಡಿಸಿದ್ದೇನೆ. ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪಹಣಿ ಪತ್ರಗಳನ್ನು ನೀಡಿರುತ್ತೇನೆ ಯಾವುದೇ ಖರೀದಿ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಐಟಂ ಸಂಖ್ಯೆ 1 ರಿಂದ 4 ಭೂ ಸ್ವಾಧೀನ ಆಗಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳ ಬಗ್ಗೆ ಕೆಐಎಡಿಬಿ ಯವರು ಯಾವಾಗ ಭೂ ಸ್ವಾಧೀನ ಮಾಡಿಕೊಂಡಿರುತ್ತಾರೆ, ಎಷ್ಟು ಪರಿಹಾರದ ಹಣವನ್ನು ನಿರ್ಧರಿಸಿರುತ್ತಾರೆ ಇತ್ಯಾದಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಪಹಣಿ, ಮ್ಯುಟೇಶನ್, ಇ.ಸಿ. ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತುಗಳ ಕುರಿತಂತೆ ಕೆಂಪಣ್ಣ ಅವರ ಹೆಸರಿನಲ್ಲಿ ಪರಿಹಾರ ಹಣ ನೀಡಿರುತ್ತಾರೆ. ಈ ದಾವೆಯಲ್ಲಿ ಕೆಐಎಡಿಬಿಯವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಪರಿಹಾರದ ಹಣವನ್ನು ಸಂಪೂರ್ಣವಾಗಿ ಕೆಂಪಣ್ಣ ಅವರು

ಪಡೆದುಕೊಂಡಿರುತ್ತಾರೆ. ಈ ದಾವೆ ದಾಖಲಿಸಿದ ನಂತರ ಪಡೆದುಕೊಂಡಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಆ ಬಗ್ಗೆ ಹೇಳಿರುತ್ತೇನೆ. ನನ್ನ ಮುಖ್ಯವಿಚಾರಣೆಯಲ್ಲಿ ಆ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 1 ರಿಂದ 4 ಮುನಿಕೆಂಪಣ್ಣ ಅವರ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಅದರಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು 1 ನೇ ಪ್ರತಿವಾದಿಗೆ ಮಂಜೂರು ಆಗಿರುವ ಆಸ್ತಿಗಳಾಗಿರುವುದರಿಂದ ಕೆಐಎಡಿಬಿಯವರು ಅವರ ಹೆಸರಿನಲ್ಲಿ ಪರಿಹಾರದ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 5 ಮುನಿಕೆಂಪಣ್ಣ ಅವರು ಖರೀದಿಸಿದ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತು ನಮ್ಮ ತಾತನಿಗೆ ಸೇರಿದ್ದು ಎಂದು ತೋರಿಸಲು ಪಹಣಿ, ಮ್ಯುಟೇಶನ್ ಮತ್ತು ಹಿಂದಿನ ದಾಖಲೆ ಪತ್ರಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ದಾವಾ ಐಟಂ ಸಂಖ್ಯೆ 5 ನಮ್ಮ ತಾತನಿಗೆ ಸೇರಿದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ತಾತ ಉತ್ತನಾಳಪ್ಪ ಅವರ ಹೆಸರಿನಲ್ಲಿ ಇತ್ತು. ಸದರಿ ಸ್ವತ್ತು ಉತ್ತನಾಳಪ್ಪ ಅವರು ಖರೀದಿಸಿದ ಸ್ವತ್ತು. ಸುಮಾರು 40-50 ವರ್ಷದ ಹಿಂದೆ ಖರೀದಿಸಿರುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ದಾವಾ ಐಟಂ ಸಂಖ್ಯೆ5 ನ್ನು ಉತ್ತನಾಳಪ್ಪ ಅವರು ಖರೀದಿಸಿದ ದಾಖಲೆ ಇಲ್ಲ ಎಂದರೆ ಸರಿಯಲ್ಲ.

**2)** ದಾವಾ ಐಟಂ ಸಂಖ್ಯೆ 6 1 ನೇ ಪ್ರತಿವಾದಿ ಖರೀದಿಸಿದ ಸ್ವತ್ತು ಎಂದರೆ ಸರಿಯಲ್ಲ. ಅದನ್ನು ನಮ್ಮ ತಾತ ಭೈರಪ್ಪ ಅವರು ಖರೀದಿಸಿರುತ್ತಾರೆ. ಸದರಿ ಭೈರಪ್ಪ ನಮ್ಮ ತಾತ ಅಲ್ಲ ಎಂದರೆ ಸರಿಯಲ್ಲ. ಅವರು ಸುಮಾರು 40 ವರ್ಷದ ಹಿಂದೆ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ. ಆ ಬಗ್ಗೆ ಪಹಣಿ, ಮ್ಯುಟೇಶನ್, ಹಾಗೂ ಕೈಬರಹದ ಪತ್ರ ನೀಡಿರುತ್ತೇನೆ. ದಾವಾ ಐಟಂ ಸಂಖ್ಯೆ 7, 1 ನೇ ಪ್ರತಿವಾದಿಯು ಖರೀದಿಸಿದ ಸ್ವತ್ತು ಎಂದರೆ ಸರಿಯಲ್ಲ. ಉತ್ತನಾಳಪ್ಪ ಅವರು ಖರೀದಿಸಿದ ಸ್ವತ್ತು. ಸುಮಾರು 48 ವರ್ಷದ ಹಿಂದೆ ಖರೀದಿಸಿರುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ಈಗ 1 ನೇ ಪ್ರತಿವಾದಿ ಹೆಸರಿನಲ್ಲಿ ಇದೆ. ನಿ.ಪಿ.48 ರ

ಪ್ರಕಾರ ಸರ್ವೆ ಸಂಖ್ಯೆ 10-2 ಕೆಐಎಡಿಬಿ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಸ್ವತ್ತು ಆ ಹಿಂದೆ ಯಾರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನಿ.ಪಿ.53 ರ ಸರ್ವೆ ಸಂಖ್ಯೆ 10-1 ದಾವಾ ಆಸ್ತಿಗಳಲ್ಲಿ ಸೇರಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ಕೆಐಎಡಿಬಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಆಸ್ತಿ ಮೊದಲು ಯಾರಿಗೆ ಸೇರಿತ್ತು ಎಂದು ತೊರಿಸಲು ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಎರಡೂ ಸ್ವತ್ತುಗಳನ್ನು ಉತ್ತನಾಳಪ್ಪ ಅವರ ಖರೀದಿಸಿದ್ದರು. ಆ ಬಗ್ಗೆ ಪಹಣಿ, ಮ್ಯುಟೇಶನ್ ಮತ್ತು ದಾಖಲೆ ಪತ್ರಗಳನ್ನು ನೀಡಿರುತ್ತೇನೆ. ಸುಮಾರು 30-40 ವರ್ಷಗಳ ಹಿಂದೆ ಸದರಿ ಸ್ವತ್ತನ್ನು ಖರೀದಿಸಿರುತ್ತಾರೆ. ಸದರಿ ಎರಡೂ ಸ್ವತ್ತುಗಳ ಪರಿಹಾರದ ಹಣವನ್ನು 1 ನೇ ಪ್ರತಿವಾದಿಗೆ ನೀಡಿರುತ್ತಾರೆ. ಸದರಿ ಎರಡೂ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ, ಯಾರದ್ದೋ ಪಹಣಿ ಪತ್ರಿಕೆಗಳನ್ನು ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಐಟಂ ಸಂಖ್ಯೆ 8 ಉತ್ತನಾಳಪ್ಪ ಅವರ ಹೆಸರಿನಲ್ಲಿ ಮೊದಲು ಇತ್ತು. ಸದರಿ ಸ್ವತ್ತನ್ನು ಅವರು ಖರೀದಿ ಮಾಡಿರುತ್ತಾರೆ. ಅದನ್ನು ಯಾವಾಗ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ಪಹಣಿ, ಮ್ಯುಟೇಶನ್ ಮತ್ತು ದಾಖಲೆ ಪತ್ರಗಳನ್ನು ನೀಡಿರುತ್ತೇನೆ. ದಾವಾ ಐಟಂ ಸಂಖ್ಯೆ 8 ಈಗ 1 ನೇ ಪ್ರತಿವಾದಿಯ ಮಕ್ಕಳ ಹೆಸರಿನಲ್ಲಿ ಇದೆ. ದಾವಾ ಐಟಂ ಸಂಖ್ಯೆ 9 ರ ವಿಸ್ತೀರ್ಣ ಮತ್ತು ಗ್ರಾಮ ಯಾವುದು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಉತ್ತನಾಳಪ್ಪ ಅವರು ಖರೀದಿಸಿರುತ್ತಾರೆ. ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತು ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ 10 ಯಾರಿಗೆ ಸೇರಿತ್ತು, ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ 11 ಭೈರಪ್ಪ ಅವರ ಹೆಸರಿನಲ್ಲಿದೆ, ವಿಸ್ತೀರ್ಣ ಗೊತ್ತಿಲ್ಲ. ಈಗ ಸದರಿ ಸ್ವತ್ತು 1 ನೇ ಪ್ರತಿವಾದಿ ಹೆಸರಿನಲ್ಲಿದೆ. ದಾವಾ ಐಟಂ ಸಂಖ್ಯೆ 12 ಭೈರಪ್ಪ ಅವರ ಹೆಸರಿನಲ್ಲಿ ಮೊದಲು ಇದ್ದು, ಈಗ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ, ಅದರ ವಿಸ್ತೀರ್ಣ ಗೊತ್ತಿಲ್ಲ. ಸದರಿ ಸ್ವತ್ತು ಭೈರಪ್ಪ ಅವರ ಹೆಸರಿನಲ್ಲಿ ಕ್ರಯ ಆಗಿರುತ್ತದೆ.

ಯಾವಾಗ ಕ್ರಯ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಈಗ ಮುನಿಕೆಂಪಯ್ಯ ಅವರ ಹೆಸರಿನಲ್ಲಿ ಇದೆ ಎಂದು ಪುನಃ ನುಡಿಯುತ್ತೇನೆ. ದಾವಾ ಐಟಂ ಸಂಖ್ಯೆ 13 ಉತ್ತನಾಳಪ್ಪ ಅವರು ಖರೀದಿಸಿದ ಸ್ವತ್ತು. ಸದರಿ ಸ್ವತ್ತನ್ನು ಯಾವಾಗ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಸದರಿ ಸ್ವತ್ತು ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಈ ದಾವೆ ದಾಖಲಿಸಿದ ಮೇಲೆ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಸದರಿ ಸ್ವತ್ತನ್ನು ವರ್ಗಾಯಿಸಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ಕ್ರಯಪತ್ರ, ಹೊಸ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ದಾವಾ ಐಟಂ ಸಂಖ್ಯೆ 14 ಎಷ್ಟು ವಿಸ್ತೀರ್ಣ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಉತ್ತನಾಳಪ್ಪ ಅವರ ಹೆಸರಿನಲ್ಲಿತ್ತು. ಸದರಿ ಸ್ವತ್ತನ್ನು ಅವರು ಖರೀದಿಸಿರುತ್ತಾರೆ. ಸುಮಾರು 40-50 ವರ್ಷದ ಹಿಂದೆ ಖರೀದಿಸಿರುತ್ತಾರೆ. ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ಸಂಖ್ಯೆ 15 ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಭೂ ಸ್ವಾಧೀನ ಆಗಿರುವುದಿಲ್ಲ. ದಾವಾ ಐಟಂ ಸಂಖ್ಯೆ 15 ಅಪ್ಪಾಜಪ್ಪ ಅವರ ಸ್ವತ್ತು. ಅವರು ಸದರಿ ಸ್ವತ್ತನ್ನು ಖರೀದಿಸಿರುತ್ತಾರೆ. ಸುಮಾರು 50 ವರ್ಷದ ಹಿಂದೆ ಖರೀದಿಸಿರುತ್ತಾರೆ. ಈಗ ಸದರಿ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಅವರಿಗೆ ಸದರಿ ಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳ ಹೊರತಾಗಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

**ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**